**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ : 43/2022**

**ಪಿ ಡಬ್ಲೂ - 14**

**ಸಿ ಡಬ್ಲೂ - 16**

**ದಿಃ 13.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ನರಸಿಂಹಮೂರ್ತಿ**

**ತಂದೆಯ ಹೆಸರು ಃ ಲೇಟ್ ಹೆಚ್. ಯಲ್ಲಪ್ಪ**

**ವಯಸ್ಸು ಃ 54 ವರ್ಷ**

**ಉದ್ಯೋಗ ಃ ಹೆಚ್.ಸಿ., ಮಹಿಳಾ ಪೋಲೀಸ್ ಠಾಣೆ**

**ವಿಳಾಸ ಃ ಸುಭಾಷ್‌ನಗರ, ನೆಲಮಂಗಲ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ನಾನು 2019 ರಿಂದ ದೊಡ್ಡಬಳ್ಳಾಪುರ ಮಹಿಳಾ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ05.07.2021 ರಂದು ನಾನು ಠಾಣಾ ಎಸ್.ಹೆಚ್.ಓ. ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸಂಜೆ 05-30 ಗಂಟೆ ಸಮಯದಲ್ಲಿ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ನಂ. 74/2021 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವ.ಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು ಹಾಗೂ ಪ್ರತಿಯನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಪ್ರ.ವ.ವ.ಯನ್ನು ನಿಪಿ-15 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ದಿಃ 06.07.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಪಂಚರಾದ ಚಾಸಾ-1, 4 ಮತ್ತು 5 ರವರ ಸಮಕ್ಷಮ ಭೇಟಿಕೊಟ್ಟು ಬೆಳಿಗ್ಗೆ 11-00 ರಿಂದ 11-45 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದೆನು. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಂತರ ದಿಃ 28.07.2021 ರಂದು ಅಮಾನತ್ತುಪಂಚನಾಮೆಯನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 3-10 ರಿಂದ 3-50 ಗಂಟೆಯವರೆಗೂ ಮಾಡಿ ಮದುವೆಯ ಫೋಟೋಗಳನ್ನು ಹಾಗೂ ಲಗ್ನಪತ್ರಿಕೆಯನ್ನು ಅಮಾತ್ತುಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 48/2021 ರಡಿಯಲ್ಲಿ ಭರಾಯಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದೆನು. ಸಾಕ್ಷಿಯು ನಿಪಿ-3 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು.

**C.C.No.43/2022**
**PW.14**

**<u>ಮುಂದುವರೆದ ಮುಖ್ಯ ವಿಚಾರಣೆ</u> ಃ ಈ ಹಂತದಲ್ಲಿ ಸ ಸ ಅ ರವರ ವಿನಂತಿಯ ಮೇರೆಗೆ ಸಾಕ್ಷಿಯ ವಿಚಾರಣೆಯನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**